ಇ) ಕೋಲಾರ ಜಿಲ್ಲಾ ಪಂಚಾಯತ್‌ನಲ್ಲಿ ಖರೀದಿ ಸಮಿತಿಯವರು ಟೆಂಡರ್ ಕರೆದಿರುವ ವಿಚಾರ

ಶ್ರೀ ಕೆ.ಶ್ರೀನಿವಾಸ (ಕೋಲಾರ): ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲಾ ಪಂಚಾಯತ್‌ನಲ್ಲಿ 23-3-2000ದಲ್ಲಿ ಖರೀದಿ ಸಮಿತಿಯಲ್ಲಿ ಎಸ್‌ಸಿ/ಎಸ್‌ಟಿ ಕಾರ್ಪೋರೇಷನ್‌ಗೆ ಸ್ಟೇಯರ್ ಕೊಡಲು ಒಂದು ಟೆಂಡರ್‌ನ್ನು ಕರೆದರು. ಆ ಟೆಂಡರ್‌ನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಅಧ್ಯಕ್ಷರು: ಅದೆಲ್ಲವನ್ನು ಓದುವಷ್ಟು ಕಾಲಾವಕಾಶ ಇಲ್ಲ. ವಿಷಯವನ್ನು ಸಂಕ್ಷಿಪ್ತವಾಗಿ ಸಭೆಯ ಗಮನಕ್ಕೆ ತನ್ನಿ.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೇ, 1495 ರೂಪಾಯಿಗಳ ಬಹಳ ಹೆಚ್ಚಿನ ಟೆಂಡರ್‌ನ್ನು ಕರೆದಿದ್ದಾರೆ. ಅದರಲ್ಲಿ ಬಹಳ ಕಡಿಮೆ ಟೆಂಡರ್ ಕೊಟ್ಟಿರುವವರು 980ರೂಪಾಯಿಗಳನ್ನು ಕೊಟ್ಟಿದ್ದು ಅವರು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ. ಈ ಸ್ಟೇಯರ್ಸ್‌ನ್ನು ಎಸ್‌ಸಿಎಸ್‌ಟಿಯಲ್ಲಿನ ಸಿಲ್ಕ್ ಗ್ರೋವರ್ಸ್‌ಗೆ ಕೊಡುತ್ತಾರೆ. ಇದಕ್ಕೆ 11,86,140 ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇಷ್ಟು ಹಣಕ್ಕೆ 792 ಸ್ಟೇಯರ್‌ಗಳನ್ನು ಕೊಂಡಿದ್ದು ಅದರಲ್ಲಿ ಒಂದು ಸ್ಟೇಯರ್‌ಗೆ 500 ರೂಪಾಯಿಗಳ ವ್ಯತ್ಯಾಸವಿದೆ. ಈ ರೀತಿ ಖರೀದಿಯು ಕೋಲಾರದಲ್ಲಿ ಮಾತ್ರವಲ್ಲ ಎಲ್ಲಾ ಜಿಲ್ಲಾ ಪಂಚಾಯಿತಿಗಳಲ್ಲಿ ಆಗುವಂಥ ಪರಿಸ್ಥಿತಿ ಇದೆ. ಕೋಲಾರದಲ್ಲಿ ಹಗಲು ದರೋಡೆಯಾಗಿದೆ. ಜಿಲ್ಲಾ ಪಂಚಾಯಿತಿಯ ಸಭೆಯಲ್ಲಿ ಇಲ್ಲಿ ಆಗಿರುವ ನೂರಾರು ಕೋಟಿ ರೂಪಾಯಿಗಳ ಅವ್ಯವಹಾರದ ಬಗ್ಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ವಿಚಾರಣೆ ಮಾಡಿಸಬೇಕೆಂದು ತೀರ್ಮಾನ ತೆಗೆದುಕೊಂಡು ಸರ್ಕಾರಕ್ಕೆ ಕಳಿಸಿಕೊಟ್ಟಿದ್ದೇವೆ. ಆದರೆ ಇದುವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಹನ್ನೊಂದು ಲಕ್ಷ ರೂಪಾಯಿಗಳ ಖರೀದಿಯಲ್ಲಿ ನೋಡೂ ನೋಡದಂತೆ ಐದು ಲಕ್ಷದವರೆಗೆ ಅವ್ಯವಹಾರ ಆಗುತ್ತಿದೆ. ಇದರ ಬಗ್ಗೆ ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೀರಿ? ಇನ್ನು ಇಂಥ ಬಹಳಷ್ಟು ವಿಚಾರಗಳು ಇದೆ. ಆದರೆ ಇಸಮಯದ ಕೊರತೆಯಿಂದ ಅದನ್ನೆಲ್ಲ ನಾನು ಹೇಳುತ್ತಿಲ್ಲ. ಕೋಲಾರ ಮಾತ್ರವಲ್ಲ ಎಲ್ಲಾ ಜಿಲ್ಲಾಪಂಚಾಯಿತಿಗಳ ಖರೀದಿ ಸಮಿತಿಯ ಮೇಲೆ ಸರ್ಕಾರ ತಮ್ಮದೇ ಆದ ಹಿಡಿತವನ್ನು ಇಡಬೇಕು. ಆ ಹಿಡಿತಕ್ಕೆ ಒಳಪಟ್ಟು ಖರೀದಿ ಮಾಡಬೇಕು ಎಂದು ನನ್ನ ಅನಿಸಿಕೆ. ಅದರ ಬಗ್ಗೆ ಗಮನ ಹರಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಸಿ.ಬೈರೇಗೌಡ: ಇದರ ಬಗ್ಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ವಿಚಾರಣೆ ಮಾಡಿಸಬೇಕೆಂದು ಜಿಲ್ಲಾ ಪಂಚಾಯಿತಿಯಲ್ಲಿ ಅವಿರೋಧವಾಗಿ ತೀರ್ಮಾನವಾಗಿದೆ. ಹೀಗೆ ಎರಡು ಮೂರು ಸಲ ತೀರ್ಮಾನವಾಗಿದೆ. ಆದರೆ ಜಿಲ್ಲಾ ಪಂಚಾಯಿತಿಯಲ್ಲಿ

ಆಗಿರುವ ಆ ತೀರ್ಮಾನದ ಬಗ್ಗೆ ಬರೆದಿರತಕ್ಕಂತಹ ಪತ್ರವೇ ಇದುವರೆಗೆ ಸರ್ಕಾರಕ್ಕೆ ಮುಟ್ಟಿಲ್ಲ. ಎಲ್ಲವನ್ನು ಅಲ್ಲೇ ಮುಚ್ಚಿಡುವ ಪ್ರಯತ್ನ ನಡೆದಿದೆ. ಅವರು ಒಂದು ಉದಾಹರಣೆಯನ್ನು ಮಾತ್ರ ಹೇಳಿದ್ದಾರೆ. ಆ ಖರೀದಿ ಸಮಿತಿಯಲ್ಲಿ ಇಂಥ ಹತ್ತಾರು ಸಾಮಗ್ರಿಗಳನ್ನು ಕೊಂಡುಕೊಳ್ಳಲು ತೀರ್ಮಾನ ಮಾಡಿದ್ದಾರೆ., ಪ್ರತಿಯೊಂದು ಬಾಬಿನಲ್ಲು ಕೋಟಿಗಟ್ಟಲೆ ಹಣದ ಲೂಟಿಯಾಗುತ್ತಿದೆ. ಆದ್ದರಿಂದ ತಕ್ಷಣ ಇದರ ಬಗ್ಗೆ ವಿಚಾರಣೆ ಮಾಡಲು ನಿವೃತ್ತ ಜಿಲ್ಲಾ ನ್ಯಾಯಾದೀಶರನ್ನು ನೇಮಕ ಮಾಡಬೇಕು. ಮತ್ತು ಏನಾಗಿದೆ ಎಂಬ ವರದಿ ತರಿಸಬೇಕು. ದಯಮಾಡಿ ಈ ಕೆಲಸವನ್ನು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರು): ಮಾನ್ಯ ಅಧ್ಯಕ್ಷರೆ, ಮಾಹಿತಿಯನ್ನು ನನಗೆ ಕೊಟ್ಟರೆ ಯಾರಿಂದ ವರದಿಯನ್ನು ತರಿಸಬೇಕೋ ಅವರಿಂದ ತರಿಸುತ್ತೇನೆ. ನನ್ನ ಹತ್ತಿರ ಆ ಮಾಹಿತಿ ಇಲ್ಲ. ಆದ್ದರಿಂದ ಆ ಮಾಹಿತಿ ನನಗೆ ಕೊಟ್ಟರೆ ಸರ್ಕಾರ ಖಂಡಿತವಾಗಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

(ಈ) ಕೃಷಿ ವಿಶ್ವವಿದ್ಯಾನಿಲಯದ ಸಿಬ್ಬಂದಿ ಬಗ್ಗೆ.

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷಿ ಸಚಿವರ ಗಮನಕ್ಕೆ ಗಂಭೀರವಾದ ಒಂದು ವಿಚಾರವನ್ನು ತರಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಎರಡು ಕೃಷಿ ವಿಶ್ವವಿದ್ಯಾನಿಲಯಗಳು ಇದೆ. ಅಲ್ಲಿರುವಂಥ ಎಲ್ಲಾ ಶಿಕ್ಷಕರು ಈಗಾಗಲೇ ಮುಷ್ಕರದಲ್ಲಿದ್ದಾರೆ. ವಿಶ್ವವಿದ್ಯಾನಿಲಯದ ಅನುದಾನ ಆಯೋಗದ ಶಿಫಾರಸ್ಸಿನಂತೆ 1996ರ ಜನವರಿ ಒಂದರಿಂದಲೇ ಜಾರಿಗೆ ಬರುವಂತೆ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಮಾರ್ಚ್ 3, 1999ರಂದು ಎಲ್ಲಾ ರಾಜ್ಯಗಳ ಕೃಷಿ ವಿಶ್ವವಿದ್ಯಾನಿಲಯಗಳಿಗೆ ಅನ್ವಯವಾಗುವಂತೆ ಪರಷ್ಕೃತ ವೇತನವನ್ನು ನೀಡಲು ಆಜ್ಞೆಯನ್ನು ಹೊರಡಿಸಿದೆ. ರಾಜ್ಯ ಸಚಿವ ಸಂಪುಟ ಸಹ 28.9.1999ರಂದು ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿದೆ. ತದನಂತರ 14.1.2000ರಲ್ಲಿ ಇದರ ಬಗ್ಗೆ ರಾಜ್ಯ ಪತ್ರದಲ್ಲಿ ಪ್ರಕಟಣೆ ಸಹ ಬಂದಿರುತ್ತದೆ. ಆದರೆ ಆ ಪ್ರಕಟಣೆಯಲ್ಲಿ ಪ್ರಾರಂಭಿಕ ವೇತನವಾದ ರೂ.14,940ನ್ನು ಕೈಬಿಡಲಾಗಿದೆ. ಆ ವೇತನ ಶ್ರೇಣಿಯನ್ನು ಇದರಲ್ಲಿ ಸೇರಿಸಿಲ್ಲ. ಅವರು ಮುಷ್ಕರ ಮಾಡಲು ಹೋಗುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ವಿವಿಧ ಪರೀಕ್ಷೆಗಳು ಪ್ರಾರಂಭವಾಗಬೇಕಿತ್ತು, ಆದರೆ ಅದನ್ನು ಮುಂದೂಡುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದರ ಬಗ್ಗೆ ಬಹುಶಃ ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಇದಕ್ಕೆ ಸಂಬಂಧಪಟ್ಟಂತೆ ಕೇಂದ್ರದಿಂದ ಈಗಾಗಲೆ 80 ಪರ್‌ಸೆಂಟ್ ಹಣವನ್ನು ಸಹ ಕೊಟ್ಟಿದ್ದಾರೆ. ಅದರ ಜೊತೆಗೆ ಬಡ್ಡಿಯ ಹಣ 42 ಲಕ್ಷ ರೂಪಾಯಿಗಳೂ ಕೂಡ ಬಂದಿದೆಯೆಂದು ನನ್ನ ಗಮನಕ್ಕೆ ಬಂದಿದೆ. ರಾಜ್ಯ ಸರ್ಕಾರ ಶೇಕಡ 20ರಷ್ಟು ಮಾತ್ರ